Action being taken to repair the X Ray machine. Now, the amount has been released for 3 months only. No discrimination has been made while making the budget provision in respect of hospitals. Suitable action will be taken to supply medicines in time.

MATTER UNDER RULE 312

Re: Electricity Tarriff Rates.

† ಶ್ರೀ ಎಂ.ಸಿ. ಬಸಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ರೂಲ್ ೩೧೨ರ ಪ್ರಕಾರ ಕರ್ನಾಟಕ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರು ವ್ಯವಸಾಯಗಾರರಿಗೆ ಒದಗಿಸಿರತಕ್ಕ ವಿದ್ಯುಚ್ಛಕ್ತಿ ಬಳಕೆದಾರರ ಮೇಲೆ ಈ ದರವನ್ನು ಜಾಸ್ತಿ ಮಾಡಿದುದರ ಪರಿಣಾಮ ನಾನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸಿದ್ದೇನೆ. ಈ ಹೊಸ ವಿದ್ಯುಚ್ಛಕ್ತಿ ದರಗಳು ದಿನಾಂಕ ೧ನೇ ಏಪ್ರಿಲ್ ೧೯೭೮ ರಿಂದ ಜಾರಿಗೆ ಬಂದಿದೆ. ಬಹುಶಃ ಅದಕ್ಕಿಂತಲೂ ಮೊದಲು ವ್ಯವಸಾಯಗಾರರು ಬಳಸುತ್ತಿದ್ದಂತ ವಿದ್ಯುಚ್ಛಕ್ತಿ ದರ ಈ ರೀತಿ ಇತ್ತು. ಪ್ರತಿಯೊಂದು ಯೂನಿಟ್‌ಗೂ ಕೂಡ ಫ್ಲಾಟ್ ರೇಟ್ ೧೫ ಪೈಸೆ ಪ್ರಕಾರ ಹಾಕಿದ್ದರು. ಇತ್ತೀಚೆಗೆ ಡಿಮ್ಯಾಂಡ್ ಚಾರ್ಜ್ ೧೦ ರೂಪಾಯಿ, ಮೀಟರ್ ಬಾಡಿಗೆ ೧ ರೂಪಾಯಿ, ಎಲೆಕ್ಟ್ರಿಸಿಟಿ ಟ್ಯಾಕ್ಸ್ ೧ ಪೈಸೆ ಹಾಕಿದ್ದರು. ದಿನಾಂಕ ೧ನೇ ಏಪ್ರಿಲ್ ೧೯೭೮ ರಲ್ಲಿ ದರವನ್ನು ಪುನರ್‌ವಿಮರ್ಶೆಮಾಡಿ ಹೆಚ್ಚು ಮಾಡಿದ್ದರ ಮೇಲೆ ವಿಧಿಸಿರತಕ್ಕ ದರ ಈ ರೀತಿ ಇದೆ. ಮೊದಲು ೨೦೦ ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ೨೩ ಪೈಸೆಯಂತಲೂ, ನಂತರ ೨೦೦ ಯೂನಿಟ್‌ಗಳ ಮೇಲೆ ಬಳಸತಕ್ಕ ಪ್ರತಿ ಯೂನಿಟ್‌ಗೆ ೨೫ ಪೈಸೆಯಂತೆ ಮಾಡಿದ್ದಾರೆ. ಈಗ ಡಿಮ್ಯಾಂಡ್ ಚಾರ್ಜ್ ವಜಾ ಮಾಡಿದ್ದಾರೆ, ಮೀಟರ್ ಬಾಡಿಗೆ ೧ ರೂಪಾಯಿ ಹಾಗೆ ಇಟ್ಟುಕೊಂಡಿದ್ದಾರೆ ಮತ್ತೆ ಎಲೆಕ್ಟ್ರಿಸಿಟಿ ಡ್ಯೂಟಿ ೧ ಪೈಸೆ ಹಾಗೆ ಇಟ್ಟುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಹಣಕಾಸಿನ ಮಂತ್ರಿಗಳು ಆಯವ್ಯಯ ಪತ್ರದಲ್ಲಿ ಹೇಳಿರತಕ್ಕ ಒಂದು ಮಾತನ್ನು ಇಲ್ಲಿ ಜ್ಞಾಪಕಕ್ಕೆ ತರಬೇಕಾಗಿದೆ. ಆವರು ಕೃಷಿ ಬಗ್ಗೆ, ಕೃಷಿ ಉದ್ದೇಶಗಳಿಗಾಗಿ ಬಳಸುವ ವಿದ್ಯುತ್ತಿನ ಮೇಲೆ ವಿಧಿಸಲಾಗುತ್ತಿರುವ ದರವನ್ನು ಈಗಿರುವಂತೆಯೇ ಉಳಿಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಈ ಮನೆಯ ಮುಂದೆ ಈ ರೀತಿ ಹೇಳಿದ್ದಾರೆ. ಇರಿಗೇಷನ್ ಪಂಪುಸೆಟ್ಟುಗಳ ಮೇಲೆ ಯಾವರೀತಿ ಇನ್‌ಕ್ರೀಸ್ ಮಾಡಿದ್ದೇವೆ ಎನ್ನುವ ಬಗ್ಗೆ ಈ ಮನೆಗೆ ಒಂದು ಟೇಬಲ್ ಕೊಟ್ಟು ಕೇವಲ ೧.೬೨ ಮಾತ್ರ ವಿದ್ಯುತ್ ದರವನ್ನು ಈ ವಿದ್ಯುತ್ ಪಂಪು ಸೆಟ್ಟುಗಳ ಮೇಲೆ ಜಾಸ್ತಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಈ ಸಭೆಯನ್ನು ಒಂದು ರೀತಿಯಲ್ಲಿ ಮಿಸ್‌ಲೀಡ್ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವುತ್ತು ತಾವು ಯಾವುದೋ ಒಂದು ಆವರೇಜ್ ಕಂಡುಹಿಡಿದುಕೊಂಡಿದ್ದೀರಿ. ತಾವು ಇರಿಗೇಷನ್ ಪಂಪು ಸೆಟ್ಟುಗಳ ಆವರೇಜ್ ತೆಗೆದುಕೊಳ್ಳುತ್ತಿಲ್ಲ. ಇಷ್ಟು ದರ ಏತಕ್ಕೆ ಬಂತು ಎನ್ನುವುದನ್ನು ತಾವು ಆಲೋಚನೆ ಮಾಡಬೇಕಾಗಿತ್ತು. ಇವೊತ್ತು ಇಡೀ ರಾಜ್ಯದಲ್ಲಿ ೨ ಲಕ್ಷ ೫೦ ಸಾವಿರ ಪಂಪುಸೆಟ್ಟುಗಳು ಇವೆ. ಅದರಲ್ಲಿ ೧ ಲಕ್ಷ ಪಂಪ್ ಸೆಟ್ಟುಗಳು ಕೆಲಸಮಾಡುತ್ತಿಲ್ಲ ಎಂದು ಹೇಳಬೇಕಾದರೆ, ಇವರು ವಿದ್ಯುಚ್ಛಕ್ತಿ ಬಳಕೆಯ ಲೆಕ್ಕ ಹಾಕಿಕೊಳ್ಳಬೇಕಾದರೆ ಎಲ್ಲಾ ಒಟ್ಟು ಲೆಕ್ಕ ಹಾಕಿ ಆವರೇಜ್ ತೆಗೆದುಕೊಂಡಿದ್ದಾರೆ. ಇದರಿಂದ ಏನು ತೊಂದರೆಯಾಗಿದೆ ಎಂದರೆ ಯಾರು ವಿದ್ಯುತ್ ಬಳಕೆ ಮಾಡುತ್ತಿದ್ದಾರೆ ಅವರು, ಯಾರು ವಿದ್ಯುತ್ ಬಳಕೆ ಮಾಡುವುದಿಲ್ಲ ಅವರ ಹಣವನ್ನು ಸೇರಿಸಿ ಕಟ್ಟಬೇಕಾಗಿದೆ. ಆ ರೀತಿಯಲ್ಲಿ ತಾವು ಆವರೇಜ್ ತೆಗೆದುಕೊಂಡಿದ್ದೀರಿ. ಮಾನ್ಯ ಹಣಕಾಸಿನ ಮಂತ್ರಿಗಳವರ ಬಾಯಿಂದ ಕೃಷಿಕರಿಗೆ ಇದರಿಂದ ಅನುಕೂಲವಾಗುತ್ತದೆ, ಎನ್ನುವ ಮಾತನ್ನು ಹೇಳಿಸಿದ್ದೀರಿ. ಇವೊತ್ತು ವ್ಯವಸಾಯಗಾರರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾಗಿದೆ. ಏಕೆಂದರೆ ಆವರು ಬೆಳೆಯತಕ್ಕ ಆಹಾರ ಪದಾರ್ಥಗಳ ಧಾರಣೆ ಕುಸಿದು ಬಹಳ ಚಿಂತಾಜನಕರಾಗಿದ್ದಾರೆ. ಇವೊತ್ತು ಪಂಪುಸೆಟ್ಟಿಗೆ ಉಪಯೋಗಿಸತಕ್ಕ ವಿದ್ಯುತ್ತಿನ ಎರಡು ಬಿಲ್ಲುಗಳನ್ನು ತಂದಿದ್ದೇನೆ. ವ್ಯವಸಾಯಕ್ಕಾಗಿ ೫ ಹಾರ್ಸ್ ಪವರ್ ಉಪಯೋಗಿಸತಕ್ಕವನಿಗೆ ೧ನೇ ಏಪ್ರಿಲ್ ೧೯೭೮ರಲ್ಲಿ ಆವನ ಕನ್‌ಸಮ್ಷನ್ ಆಫ್ ಎಲೆಕ್ಟ್ರಿಸಿಟಿ ಚಾರ್ಜ್‌ಸ್ ಎಷ್ಟು ಬಂತು ಎಂದರೆ ಸಮಾರು ಎರಡು ತಿಂಗಳಲ್ಲಿ ೩ ಸಾವಿರದ ೩೭೦ ಯೂನಿಟ್ ಬಳಕೆ ಮಾಡಿದ್ದರೆ, ಹಿಂದೆ ಇದ್ದ ರೇಟ್ ಇಟ್ಟಿದ್ದರೆ ಅವನಿಗೆ ೫೬೧ ರೂಪಾಯಿಯಷ್ಟು ಬಿಲ್ಲು ಬರುತ್ತಿತ್ತು. ಈಗ ರಿವೈಸ್ಡ್ ರೇಟ್ ಪ್ರಕಾರ ತಾವು ಕಲೆಕ್ಟ್

ಮಾಡುವುದಾದರೆ ಅದೇ ಪಂಪ್‌ಸೆಟ್ಟಿನಲ್ಲಿ ಅಷ್ಟೇ ಯೂನಿಟ್‌ಗಳನ್ನು ಬಳಕೆ ಮಾಡಿದ್ದರೆ ೮೪೦ ರೂಪಾಯಿ ಬರುತ್ತದೆ. ಅಂದರೆ ಒಂದು ಪಂಪ್‌ಸೆಟ್ಟಿನ ಮೇಲೆ ಎರಡು ತಿಂಗಳಿಗೆ ಸುಮಾರು ೨೮೦ ರೂಪಾಯಿ ಗಳಷ್ಟು ಹೆಚ್ಚು ಬೀಳುತ್ತದೆ. ಇದೇ ತರಹ ಲೆಕ್ಕ ಹಾಕಿದರೆ ಹನ್ನೆರಡು ತಿಂಗಳಿಗೆ ಎಷ್ಟು ಜಾಸ್ತಿ ಬರುತ್ತದೆ ಎನ್ನುವುದನ್ನು ಲೆಕ್ಕ ಹಾಕಬೇಕು. ಈ ವಿದ್ಯುಚ್ಛಕ್ತಿ ದರ ಹೆಚ್ಚಿಸುವುದು ನಮ್ಮ ರಾಜ್ಯಕ್ಕೆ ಸೀಮಿತವಾಗಿಲ್ಲ. ಮದ್ರಾಸ್‌ನಲ್ಲೂ ಕೂಡ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ೨ ಲಕ್ಷ ೫೦ ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಟ್ಟಿದ್ದಾರೆ. ಅದೇ ಮದ್ರಾಸ್ ರಾಜ್ಯದಲ್ಲಿ ೮ ಲಕ್ಷ ೪೦ ಸಾವಿರ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಕೊಟ್ಟಿದ್ದಾರೆ. ಅವರ ಟ್ಯಾರಿಫ್ ಕೂಡ ನೋಡಿದ್ದೇನೆ. ಅವರ ಟ್ಯಾರಿಫ್ ರೇಟು ೩೦ನೇ ಆಗಸ್ಟ್ ೧೯೭೫ಕ್ಕೆ ಮುಂಚೆ ಒಂದು ಯೂನಿಟ್‌ಗೆ ೧೨ ಪೈಸೆ ಇದ್ದು, ಆನಂತರ ಒಂದು ಯೂನಿ ಟ್‌ಗೆ ೧೬ ಪೈಸೆ ಮಾಡಿದ್ದಾರೆ ಅಂದರೆ ಒಂದು ಯೂನಿಟ್‌ಗೆ ೪ ಪೈಸೆ ಮಾತ್ರ ಜಾಸ್ತಿ ಮಾಡಿದಂತಾಯಿತು. ಇವೊತ್ತು ದೇಶದಲ್ಲಿ ಪಂಪ್‌ಸೆಟ್ ಇಟ್ಟುಕೊಂಡಿರತಕ್ಕವರೆಲ್ಲ ಬಹಳ ದೊಡ್ಡವರು. ಅವರಿಗೆ ಕೊಡಲಿಕ್ಕೆ ಶಕ್ತಿ ಇದೆ ಎಂದು ತಾವು ತಿಳಿದುಕೊಳ್ಳಬಾರದು. ಈಗ ಎಸ್.ಎಫ್.ಡಿ.ಎ. ಅವರು ಎಷ್ಟು ಬಾವಿಗಳಿಗೆ ಸಾಲ ಕೊಟ್ಟಿದ್ದಾರೆ, ಅದನು ತಾವು ನೋಡಬೇಕು. ಎಷ್ಟೋ ಜನ ಸ್ಮಾಲ್ ಫಾರಮರ್ಸ್ ಎರಡು ಮೂರು ಎಕರೆ ಜಮೀನು ಇಟ್ಟುಕೊಂಡಿರತಕ್ಕವರು ಈ ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಂಡು ಕೆಲಸ ಮಾಡಿ ತಮ್ಮ ಜೀವನ ನಡೆಸುತ್ತಿದ್ದಾರೆ. ಇವರ ಕತೆ ಯಾರು ಕೇಳುವವರು? ದಯಮಾಡಿ ಪ್ರೊಸೀ ಡಿಂಗ್ಸ್‌ನ್ನು ಓದಿ ಹೇಳುತ್ತೇನೆ ಕೇಳಿ. ಮಾನ್ಯ ಶ್ರೀನಿವಾಸ್‌ರವರು, ಮಾನ್ಯ ರಾಜಶೇಖರ್‌ರವರಿಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಂಡು ಡಿಸ್‌ಕನೆಕ್ಟ್ ಆಗಿರುವುದನ್ನು ಕನೆಕ್ಟ್ ಮಾಡಿಸುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. Has this Government raised a little finger in this connection?

11-00 A.M.

SRI K.H. SRINIVAS.—That was in respect of cane crushers.

SRI M.C. BASAPPA.—That was in respect of cane growers who use elecctricity. Please read the procedings if you want. ಈಗ ನಾನು ಮದ್ರಾಸಿನ ವಿಚಾರ ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ೨½ ಲಕ್ಷ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ, ಮದ್ರಾಸಿರಲ್ಲಿ ೮½ಲಕ್ಷ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಅಲ್ಲಿ ೧೨ ಪೈಸೆ ಇದ್ದುದನ್ನು ೧೬ಪೈಸೆ ಮಾಡಿದಾಗ ಚಳುವಳಿಯಾಯಿತು, ಸಾವಿರಾರು ಜನ ಜೈಲಿಗೆ ಹೋದರು. ಆದ್ದರಿಂದ ಆ ರೇಟನ್ನು ಕನ್ಸಿಡರ್ ಮಾಡುತ್ತೇವೆಂದು ಹೇಳಿ ೨ ರೇಟ್ ಮಾಡಿದ್ದಾರೆ. ಸ್ಮಾಲ್ ಫಾರ್ಮರ್ಸ್ ಮತ್ತು ಬಿಗ್ ಫಾರ್ಮರ್ಸ್ ಎಂದು ಮಾಡಿದ್ದಾರೆ. Small farmers ಗೆ 12 paise per unit ಮಾಡಿದ್ದಾರೆ. All other farmersಗೆ 14 paise per unit ಮಾಡಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಇನ್‌ಕ್ರೀಸ್ ಮಾಡಿರುವುದು ೧.೬೪ ಗಿಂತ ಜಾಸ್ತಿಯಾಗುವುದಿಲ್ಲ ಎಂದು ಸ್ಟೇಟ್‌ಮೆಂಟ್ ಏನು ಮಾಡಿದ್ದಾರೆ ಅದು ಸತ್ಯವಾಗಿದ್ದರೆ ಇವತ್ತಿನ ದಿವಸ ತಾವು ಒಂದು ಯೂನಿಟ್‌ಗೆ ಆವರೇಜ್ ರೇಟ್ ಏನು ಸರಬರಾಜು ಮಾಡುತ್ತಿದ್ದೀರಿ ಅದನ್ನು ೧.೬೪ ಮಾಡಿ. ಆವರೇಜ್ ಏಕೆ ತೆಗೆದುಕೊಂಡಿರಿ. Because it is convenient to the Electricity Board. ಇವತ್ತು ಒಂದು ಲಕ್ಷ ಪಂಪ್‌ಸೆಟ್ಟಾ ಕೆಲಸ ಮಾಡುತ್ತಾ ಇಲ್ಲ, ಇವು ಎಲೆಕ್ಟ್ರಿಸಿಟಿಯನ್ನು ಕನ್‌ಸ್ಯೂಂ ಮಾಡುವುದಿಲ್ಲ. ಆದರಿಂದ ಮಿನಿಮಂ ವಸೂಲು ಮಾಡಿ, ಆವರೇಜ್ ಏಕೆ ಹಿಡಿಯುತ್ತೀರಿ. ಯಾರು ವ್ಯವಸಾಯ ಮಾಡುತ್ತಾರೆ ಅವರ ಮೇಲೆ ಇಲ್ಲದೇ ಇರತಕ್ಕ ಹೊರೆಯನ್ನು ಇವತ್ತು ಹೊರಿಸಿದ್ದೀರಿ. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಏನೆಂದರೆ ಇವತ್ತು ರೈತರ ಸ್ಥಿತಿ ಚಿಂತಾಜನಕವಾಗಿದೆ. ಮೈಸೂರು ಜಿಲ್ಲೆಯಲ್ಲಿ ಕೆಲವು ಕಡೆ ಮಳೆ ಸರಿ ಯಾಗಿ ಆಗಿಲ್ಲ. Crops are withering away in Mysore District. ಮೊದಲು ತಿಂಗಳಿ ಗೊಂದು ಸಲ ಬಿಲ್ ಬರುತ್ತಿತ್ತು. ಈಗ ೨ ತಿಂಗಳಿಗೆ ಒಂದು ಸಲ ಬಿಲ್ ಮಾಡಿದ್ದೀರಿ. ಈಗ ಒಂದು, ಒಂದೂವರೆ ಸಾವಿರ ರೂಪಾಯಿನ ಬಿಲ್ ಏನು ಬರುತ್ತದೆ ಅದನ್ನು ಕೊಡುವುದಕ್ಕೆ ಇವತ್ತು ರೈತನಿಗೆ ಸಾಧ್ಯವಾಗಿಲ್ಲ. ಆದುದರಿಂದ ಸರ್ಕಾರ ಇದನ್ನು ಪುನರ್ವಿಮರ್ಶೆ ಮಾಡಬೇಕು, ಅದಕ್ಕೆ ಸೂಕ್ತ ಪರಿಹಾರ ಕೊಡಬೇಕು. ಡಿಸ್‌ಕನೆಕ್ಟ್ ಏನು ಮಾಡುತ್ತಿದ್ದಾರೆ ಅದಕ್ಕೆ ವಿದ್ಯುಚ್ಛಕ್ತಿ ಮಂಡಲಿಯವರಿಗೆ ತಿಳುವಳಿಕೆ ಕೊಟ್ಟು ಇದನ್ನು ನಿಲ್ಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮದ್ರಾಸಿನಲ್ಲಿ ವಿದ್ಯುಚ್ಛಕ್ತಿ ರೇಟನ್ನು ಹೆಚ್ಚಿಸಿದಾಗ ಯಾವರೀತಿ ಚಳುವಳಿಯಾಯಿತು, ಇನ್ನು ೩ ತಿಂಗಳೊಳಗಾಗಿ ಇಲ್ಲಿ ರೇಟ್ ಕಡಿಮೆಯಾಗದೇ ಹೋದರೆ ಅದೇ ರೀತಿ ಇಲ್ಲಿಯೂ ಚಳುವಳಿಯಾದೀತು, ಅದಕ್ಕೆ ಅವಕಾಶ ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಇದು ಇಡೀ ರಾಜ್ಯದ ವಿದ್ಯುಚ್ಛಕ್ತಿ ಬಳಕೆದಾರರ ಪ್ರಶ್ನೆ ಆಗಿದೆ. ಹಿಂದೆ ಬರುತ್ತಿದ್ದುದಕ್ಕಿಂತ ಎರಡರಷ್ಟು ಜಾಸ್ತಿ ಬರುತ್ತಾ ಇದೆ. ಇಂಡಸ್ಟ್ರೀಸ್‌ಗೆ ಫೋರ್ಸ್‌ಮಾಡಿ ನೋಟೀಸ್ ಕೊಟ್ಟಿದ್ದಾರೆ. ಇದರಿಂದ ಬೆಂಗಳೂರಿನಲ್ಲಿ ನಿರುದ್ಯೋಗ ಜಾಸ್ತಿಯಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಪುನರ್ವಿಮರ್ಶೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಾನು ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೆ, ಆದುದರಿಂದ ನಾನು ಎದ್ದು ನಿಂತಿದ್ದೇನೆ. ತಮ್ಮ ಅಪ್ಪಣೆ ಪಡೆದು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತೇನೆ. ಮಾನ್ಯ ಎಂ. ಸಿ. ಬಸಪ್ಪನವರು ತಂದಿರತಕ್ಕ ವಿಚಾರ ಬಹಳ ಗಂಭೀರವಾದುದು. ಈ ಪ್ರಶ್ನೆ ರೈತರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಇದನ್ನು ಯಾರೂ ಲಘುವಾಗಿ ಕಾಣುವುದಕ್ಕೆ ಸಾಧ್ಯವಿಲ್ಲ. ಮದರಾಸ್ ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ, ಕರ್ನಾಟಕ ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದನ್ನು ವಿವರಣಾತ್ಮಕವಾದ ಹಾಗೂ ತುಲನಾತ್ಮಕವಾದ ರೀತಿಯಲ್ಲಿ ನೋಡಬೇಕು ಎಂದು ಅವರು ತಿಳಿಸಿದ್ದಾರೆ. ಈಗ ತಮ್ಮ ಗಮನಕ್ಕೆ ತರತಕ್ಕಂಥ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಪಂಪ್‌ಸೆಟ್‌ಗೆ ಶೇ ಎಚ್.ಪಿ.ಗಿಂತ ಕಡಿಮೆ ವಿದ್ಯುಚ್ಛಕ್ತಿ ಬಳಸತಕ್ಕ ರೈತರು ಯಾರಿದ್ದಾರೆ ಅವರು ಭಾವಿ ತೋಡಿಸಿರುತ್ತಾರೆ. ಪಂಪ್‌ಸೆಟ್ ಕೊಂಡುಕೊಳ್ಳಲು ಭೂ ಅಭಿವೃದ್ಧಿ ಬ್ಯಾಂಕ್ ಮತ್ತೆ ಯಾವುದಾದರೂ ಪಬ್ಲಿಸ್ಸಿ ಮೂಲಕ ಸಾಲ ತೆಗೆದುಕೊಂಡು ಅಭಿವೃದ್ಧಿ ಮಾಡಿಕೊಂಡಿರುತ್ತಾರೆ. ಇವತ್ತಿನ ದಿವಸ ಅವರು ಹೆಚ್ಚು ವಿದ್ಯುಚ್ಛಕ್ತಿ ದರವನ್ನು ಕೊಡಲಾರದೆ ತತ್ತರಿಸುತ್ತಿದ್ದಾರೆ. ಬ್ಯಾಂಕಿನ ಸಾಲ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣವೇನೆಂದರೆ. ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ವ್ಯವಸಾಯಗಾರರಿಗೆ ಏನು ಉತ್ಪತ್ತಿ ಬರಲಿತ್ತಾ ಇತ್ತು ಆಷ್ಟು ಈ ವರ್ಷ ಬರುತ್ತಾ ಇಲ್ಲ. ಇದರಿಂದ ಸರಿಯಾದ ಆದಾಯ ಬರುತ್ತಾ ಇಲ್ಲ. ಅವನಿಗೆ ಬರತಕ್ಕ ಆದಾಯದಲ್ಲಿ ವಿದ್ಯುಚ್ಛಕ್ತಿ ಕರವನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ತೊಂದರೆ ಪಡುತ್ತಿದ್ದಾನೆ. ಜೊತೆಗೆ ಸಾಲದ ಹೊರೆ ಅವನ ಮೇಲಿದೆ. ಇದನ್ನು ವಿದ್ಯುಚ್ಛಕ್ತಿ ಮಂಡಲಿಯವರು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ವಿದ್ಯುಚ್ಛಕ್ತಿ ಮಂಡಲಿ ಕೇವಲ ವ್ಯಾಪಾರಿ ಸಂಸ್ಥೆ ಎನ್ನತಕ್ಕ ಭಾವನೆಯಿಂದ ನಡೆದುಕೊಂಡರೆ ಸಾಲದು. ಇದು ಒಂದು ಪ್ರಧಾನವಾದ ಸೇವಾಸಂಸ್ಥೆ. ವ್ಯವಸಾಯಗಾರರು ಹೆಚ್ಚಾಗಿರತಕ್ಕ ಈ ರಾಜ್ಯದಲ್ಲಿ ವ್ಯವಸಾಯಗಾರರಿಗೆ ಹೆಚ್ಚು ಬೆಂಬಲ ಸಿಕ್ಕುತ್ತಾ ಇಲ್ಲ. ನಾವು ವ್ಯವಸಾಯಗಾರರಿಗೆ ಆಗತಕ್ಕ ಅನಾನುಕೂಲತೆಗಳು ಏನು ಎನ್ನುವುದರ ಕಡೆ ಲಕ್ಷ್ಯ ಕೊಡದೇ ಇರುವುದು ಸರಿಯಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ವಿದ್ಯುಚ್ಛಕ್ತಿ ಮಂಡಲಿಯವರು ಏನು ಹೇಳುತ್ತಾರೋ ಅದನ್ನೇ ವೇದವಾಕ್ಯ ಎಂದು ತಿಳಿದುಕೊಂಡು ಅದನ್ನು ಪರಿಪಾಲನೆ ಮಾಡಕೂಡದು. ತಪ್ಪಿಗೆ ವ್ಯವಸಾಯಗಾರರ ಸಂಪರ್ಕ ಹೆಚ್ಚಾಗಿದೆ. ಈ ರೀತಿ ದರ ಹೆಚ್ಚಿಸಿರುವುದನ್ನು ನೋಡಿದರೆ ವಿದ್ಯುಚ್ಛಕ್ತಿ ಮಂಡಲಿಯವರಿಗೆ ವ್ಯವಸಾಯಗಾರರ ಬಗ್ಗೆ ಕನಿಕರವಿಲ್ಲ, ಮಮತೆ ಇಲ್ಲ. ಸಹಾನುಭೂತಿ ಇಲ್ಲ, ದಯೆ ಇಲ್ಲ ಎಂದು ನಮಗೆ ಸುಸ್ಪಷ್ಟವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು, ಕಡಿಮೆ ಹಿಡುವಳಿ ಇರತಕ್ಕವರು ಕಡಿಮೆ ವಿದ್ಯುಚ್ಛಕ್ತಿ ಬಳಸಿ ಬದುಕತಕ್ಕ ಕೆಳವರ್ಗದ ಜನರಿಗೆ ಹೆಚ್ಚಿಗೆ ಹೊರೆಯಾಗದ ರೀತಿಯಲ್ಲಿ ತಾವು ಮಾಡಬೇಕು. ಹೆಚ್ಚು ವಿದ್ಯುಚ್ಛಕ್ತಿ ಬಳಸತಕ್ಕವರು, ಹೆಚ್ಚು ಜಮೀನು ಇಟ್ಟುಕೊಂಡಿರತಕ್ಕ ದೊಡ್ಡ ರೈತರು. ಅಂತಹವರಿಗೆ ಹೆಚ್ಚಾಗಿ ಹಾಕುವುದಾದರೆ ಹಾಕಲಿ ಯಾರು ಕಡಿಮೆ ಹಿಡುವಳಿ ಇಟ್ಟುಕೊಂಡು ಕಡಿಮೆ ವಿದ್ಯುಚ್ಛಕ್ತಿ ಬಳಸುತ್ತಿದ್ದಾರೆ ಅವರಿಗೆ ಆಗಿರತಕ್ಕ ತೊಂದರೆಯನ್ನು ಪಾರು ಮಾಡುವುದಕ್ಕೆ ಸರ್ಕಾರ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

† SRI M. V. RAJASEKHARAN (Uttarahalli).—Mr. Speaker, this is a vital question concerning the fate of hundreds of agriculturists I would like to bring to the notice of the House how discrimination has been perpetually maintained and practised against the interest of

farmers. What is the crime these agriculturists have committed They are the people who are producing food and feeding all of us. They have to be given all the consideration that is necessary and that is done not only in other States but in other countries also. Industrialists get concession. They are charged at 11 paise per unit whereas a farmer who is toiling has to pay 23 paise per unit if his consumption is less than 200 units and if it is more than 200 units he is charged 25 paise. I have not seen in any country a farmer being charged for the hard work he puts in. The Minister for Agriculture is present here. He can take up this issue on behalf of thousands of farmers. Otherwise, if the Government wants us to start agitation we are prepared But I would appeal to the good sense of the Government because they have to come to the help of these people. Most of them own small lands ; they are marginal and small farmers. Sir, you yourself is a witness to what is happening in Mysore, Kolar, Bangalore and Tumkur Districts. Hundreds of farmers have taken to lift irrigation because they have hardly one or two acres and it is against these people that discrimination is practised. I would appeal to the Hon'ble Minister to go into the details very carefully. I would even suggest that the Government should come forward to subsidise the rates. Why not they do it ? They are doing it with regard to the industrialists. In Madras and other States they are doing it. I request Government to consider this aspect.

Secondly, why such a heavy tariff is put both against the farmers and the domestic consumers, particularly in the City. On account of the inefficient working of the Electricity Board, revenue is wasted. I request Government to see that the revenue that is being wasted is put a stop to. I appeal to the Hon'ble Minister for Agriculture to take up these things in the Cabinet and get a favourable decision in favour of the farmers.

SRI K. H. SRINIVASA (Minister of State for Information and Youth Services). - I wish to make the following statment :—

Regarding the Notice given by Sri M.C. Basappa, under Rule 312 raising the matter relating to the recent Power tariff in respect of I.P. Sets, I make the following statment in this behalf.

There are 2,61,041 I.P. sets in service in Karnataka as at the end of May 1978. Out of these about 85% are of 5 H.P. and below. The average consumption per I.P. set per annum based on actuals and forecasts made by the Load Survey Department of Central Electricity Authority (9th and 10th Annual Power Survey) varies from 1350 to 1400 units. The effect of the revised tariff on I. P. set installations of 5 H.P. and below is furnished hereunder with referenee to the old tariff.

1. Old Tariff :

		Rs.
(a)	Demand charges at Rs. 10/- per month	120.00
(b)	Energy charges at 15 Ps. per unit for 1400 units per annum. ...	210.00
(c)	Meter hire at Rs. 1/- per month, ...	12.00
		342.00

Average rate per unit : $\frac{342 \times 100}{1400} = 24.4$ Ps.

2. Revised Tariff :

1st 200 units per month at 23 Ps. per unit.
Units above 200 units at 25 Ps.

(i)	Energy charges for 1400 units at 23 Ps. per unit per annum. ...	322.00
(ii)	Meter hire at Rs. 1/- per month per annum. ...	12.00
	Total ...	334.00

Average Rate per unit : $\frac{334 \times 100}{1400} = 23.85$ Ps.

From the above it may be seen that the average I.P. set consumer who was paying at 24.4 Ps. per unit at the old rates has now to pay 23.85 Ps. per unit. Only above 1500 units of annual consumption will the new average rate become higher than the old rate. For the entire annual consumption of 2400 units at the lower slab rate the charge remains at 23.5 Ps/unit. It will be slightly higher in case of I.P. installations which consume energy at the higher slab i.e., 25 Ps. per unit. However, the effect of the revised tariff on I. P. installations is very marginal.

There may be individual cases where the monthly bill, based on any particular monthly consumption, may show a higher rise in the bill, but on an annual basis the average rate per unit paid by the above I.P. consumers will compare favourably with the average rate per unit under the old tariff.

ಶ್ರೀ ಕೆ.ಎಚ್. ಶ್ರೀನಿವಾಸ್—ಮಾನ್ಯ ಅಧ್ಯಕ್ಷರೆ ಈ ಹೇಳಿಕೆಗೆ ಪೂರಕವಾಗಿ ಒಂದೆರಡು ವಿಷಯ ಗಳನ್ನು ಸ್ಪಷ್ಟಪಡಿಸಬಯಸುತ್ತೇನೆ. ಮಾನ್ಯ ಆರ್ಥ ಸಚಿವರು ತಮ್ಮ ಭಾಷಣದಲ್ಲಿ ಎಲೆಕ್ಟ್ರಿಸಿಟಿ ಚಾರ್ಜನ್ನು ಟ್ಯಾರೀಫ್ ರೇಟ್ಸ್ ಪ್ರಕಾರವಾಗಿ ವಂತಿಗೆಯನ್ನು ಕಲೆಕ್ಟ್ ಮಾಡಲು ಹೇಳಿದ್ದಾರೆ. ಟ್ಯಾರೀಫ್ ರೇಟ್ಸ್ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥಮಾಡಿಕೊಂಡಿರುತ್ತಾರೆ. ಇದು ಹೀಗಿರಬೇಕೆಂದು ಹೇಳುವುದರಲ್ಲಿ ತೊಂದರೆಯೇನು ಇಲ್ಲ.

ಶ್ರೀ ಎಂ.ಸಿ. ಬಸಪ್ಪ—ಈಗಿರತಕ್ಕಂಥ ಟ್ಯಾರೀಫ್ ರೇಟನ್ನೇ ಮುಂದುವರಿಸುತ್ತೇವೆಂದು ಹೇಳಿದರೆ ೨೩.೮೫ ಪೈಸೆ ಆಗುತ್ತದೆ. ಇದರಿಂದ ರೈತರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆಂದು ಹೇಳುತ್ತೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್—ನಾವು ಸೀಲಿಂಗ್ ರೇಟ್ಸ್‌ವ್ಯತ್ಯಾಸವನ್ನು ಹೇಳಿದ್ದೇವೆಯೇ ಹೊರತು ಟ್ಯಾರೀಫ್ ಯೂನಿಟ್ ಚಾರ್ಜಸ್ ಎಂದು ತಿಳಿದುಕೊಳ್ಳಬಾರದೆಂದು ಸ್ಪಷ್ಟಪಡಿಸುತ್ತೇನೆ. ಹಿಂದಿನ ಟ್ಯಾರೀಫ್ ಪ್ರಕಾರ ಯೂನಿಟ್‌ಗೆ ೧೫ ಪೈಸೆಯಂತೆ ಡಿಮ್ಯಾಂಡ್ ಚಾರ್ಜಸ್ ಸೇರಿ ಆವರೇಜ್ ಒಂದು ಯೂನಿಟ್‌ಗೆ ೨೪.೪ ಪೈಸೆ ಕಲೆಕ್ಟ್ ಮಾಡುತ್ತಿದ್ದೇವೆ. ಇದರಿಂದ ಒಂದು ಐಪಿ ಸೆಟ್ ಅಂದರೆ ೫ ಎಚ್‌ಪಿ ಗಿಂತ ಕಡಿಮೆ ಇರುವುದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಬಿಲ್ ಬರುವುದಿಲ್ಲ. ಮತ್ತೆ ರಿವೈಸ್ ಮಾಡಿರುವುದು ಎಂದರೆ ೨೭–೨೪ ಮತ್ತು ೨೫–೨೩ ಪೈಸೆಗೆ ಇಳಿಸುವುದರಿಂದ ೧ ೬ ಹೆಚ್ಚಿಗೆ ಆದಂತಾಗು ವುದಿಲ್ಲ. ಮತ್ತೆ ೩ ಪೈಸೆ ಕಡಿಮೆಯಾಗುತ್ತದೆ. ಅಂದರೆ ೨೪.೪ ಪೈಸೆ ಇದ್ದುದು ೨೩.೮ ಪೈಸೆಯಾಗು ತ್ತದೆ. Ins ead of 24 4 paise it would work out to 23.8 paise ಬಿಲ್ಲನ್ನು ಬೇರೆ ರೀತಿಯಲ್ಲಿ ತೋರಿಸುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಬಗ್ಗೆ ವಿಶೇಷವಾಗಿ ಪರಿಶೀಲನೆ ಮಾಡುವುದಕ್ಕೆ ವಿರೋಧ ಪಕ್ಷದ ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ಕರೆದು ಅವರ ಎದುರಿನಲ್ಲಿಯೇ ಚರ್ಚೆಮಾಡಿ ಪರಸ್ಪರ ತಿಳಿದುಕೊಂಡರೆ ಮುಂದೆ ಏನು ಮಾಡಲು ಸಾಧ್ಯವಾಗುತ ದೆ ಎನ್ನುವುದನ್ನು ಪರಿಶೀಲನೆ ಮಾಡಬಹುದು.

ಶ್ರೀ ಎಂ.ಸಿ. ಬಸಪ್ಪ—ಬಿಸಿನೆಸ್ ಟಮ್ರ್ಸ್‌ನಂತೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಲೆಕ್ಕ ಹಾಕಿದ್ದಾರೆ. ಅದನ್ನು ಮಾತ್ರ ತಾವು ಮುಂದೆ ಇಟ್ಟಿದ್ದೀರಿ The other aspect is not answered. Even in Madras, nearly Rs. 2 crores is subsidised by the Government to meet the expenditure of the consumers to the Electr city Board. ಎಲೆಕ್ಟ್ರಿಸಿಟಿ ರೇಟ್ಸನ್ನು ಬಜೆಟ್‌ನಲ್ಲಿ ಫೈನಾನ್ಸ್ ಮಿನಿಸ್ಟರ್ ಮುಂದೆ ಇಟ್ಟು ಎಲೆಕ್ಟ್ರಿಸಿಟಿ ಬೋರ್ಡ್ ನವರಿಗೆ ಕಷ್ಟವಾಗುತ್ತದೆಂದು ಹೇಳಿದ್ದಾರೆ. ಅದನ್ನು ಸಬ್‌ಸಿಡೈಸ್ ಮಾಡುವುದಕ್ಕೆ ಸರ್ಕಾರಕ್ಕೆ ಕೊಡಿ ಎಂದು ಹೇಳಿ.

ಶ್ರೀ ಕೆ.ಎಚ್. ಶ್ರೀನಿವಾಸ್—ಈಗಾಗಲೇ ಮಾನ್ಯ ಸಭೆಗೆ ವಿದ್ಯುಚ್ಛಕ್ತಿಯ ಬಗ್ಗೆ ಸಂಬಂಧಪಟ್ಟಂತೆ ಟ್ಯಾರೀಫ್‌ನಲ್ಲಿ There is what is known as built in subsidy inter-sectoral subsidy. ಬಗ್ಗೆ ಮದ್ರಾಸ್‌ನಲ್ಲಿ ಏನು ಮಾಡಿರುತ್ತಾರೆ ಆದರಂತೆ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಂದು ರಾಜ್ಯದಲ್ಲೂ ವಿದ್ಯುಚ್ಛಕ್ತಿ ಬಳಕೆಗೆ ಸಂಬಂಧಪಟ್ಟಂತೆ ಆಯಾ ರಾಜ್ಯಗಳಲ್ಲಿ ಒಂದೊಂದು ರೀತಿಯಾದ ಟ್ಯಾರೀಫ್ ಇಟ್ಟುಕೊಂಡಿದ್ದಾರೆ. ಆದರಂತೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಏನ್ನುವ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತೇನೆ. ಈಗ ನಾವು ಏನು ಮಾಡಿದ್ದೇವೆ ಅದು ನ್ಯಾಯವಾಗಿಯೇ ಇರುತ್ತದೆ ಹೊರತು ವಿಶೇಷವಾಗಿ ಬೆಲೆ ಹಾಕಿಲ್ಲ. ಕಲೆಕ್ಷನ್ ಸರಿಯಿಲ್ಲವೆಂದು ಹೇಳುವ ಬಗ್ಗೆ ನಾವು ತಮ್ಮ ಜೊತೆಯಲ್ಲಿ ಕುಳಿತುಕೊಂಡು ಚರ್ಚಿಸಲು ಸಿದ್ಧರಿರುತ್ತೇವೆ. ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದ್ದರೆ ಸರ್ಕಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ—ಎಲೆಕ್ಟ್ರಿಸಿಟಿ ಚಾರ್ಜಸ್ ಬಗ್ಗೆ ವಾದವಿವಾದಗಳು ನಡೆಯುತ್ತಲೇ ಇರುತ್ತದೆ. ಬಜೆಟ್ ಬಂದಮೇಲೂ ಅನೇಕ ಪತ್ರಿಕೆಗಳಲ್ಲಿಯೂ ಬಂದಿರುತ್ತದೆ ಮತ್ತು ರೈತರಿಂದ, ಮನೆಯ ಬಳಕೆದಾರರಿಂದಲೂ ಎಲೆಕ್ಟ್ರಿಸಿಟಿ ಚಾರ್ಜಸ್ ಹೆಚ್ಚಿಸಿರುವ ಬಗ್ಗೆ ಮನವಿಗಳು ಬಂದಿರುತ್ತವೆ. ಮಂತ್ರಿಗಳು ಉತ್ತರ ಕೊಡುವಾಗ ಹೆಚ್ಚಿಸಿಲ್ಲವೆಂದು ಹೇಳುತ್ತಲೇ ಇದ್ದಾರೆ.

ಐ.ಪಿ. ಸೆಟ್ಸ್ ಬಳಕೆದಾರರಿಗೆ ಮತ್ತು ಮನೆಯಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವವರಿಗೆ ನಿಜವಾಗಿ ರೇಟು ಹೆಚ್ಚಾಗಿದೆ. What is explained by the Minister is a different thing, actually we are paying more. ಇದರ ಬಗ್ಗೆ ಏನಾದರೂ ತಪ್ಪುಗಳಿದ್ದರೆ ಅದನ್ನು ಈ

ಕಡೆಯ ಕೆಲವು ಸದಸ್ಯರು ಮತ್ತು ಆ ಕಡೆಯ ಕೆಲವು ಸದಸ್ಯರು ಹಾಗೂ ಅಧಿಕಾರಿಗಳನ್ನೊಳಗೊಂಡ ಒಂದು ಸಭೆಯನ್ನು ಏರ್ಪಡಿಸಿ, ಆ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಆ ಸಭೆಯನ್ನು ಕೂಡಲೇ ಮಾಡಬೇಕು. ಒಂದು ವಾರದಲ್ಲೇ ಮಾಡಬೇಕೆಂದು ಸೂಚನೆ ಕೊಡುತ್ತೇನೆ. ಆಗ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಿ ಒಂದು ತಿಳುವಳಿಕೆಗೆ ಬಂದ ಮೇಲೆ ಒಂದು ನಿರ್ಣಯಕ್ಕೆ ಬರೋಣ. ಮಾನ್ಯ ಸಚಿವರು ಹೇಳಿಕೆ ಮಾಡಿದ ರೀತಿ ಟ್ಯಾರೀಫ್‌ನ ಪ್ರಕಾರ ನಮ್ಮ ಹತ್ತಿರ ಒಂದು ರೀತಿಯ ಅಂಕಿ ಅಂಶಗಳಿವೆ. ಸರ್ಕಾರದ ಅಂಕಿ ಅಂಶಗಳೇ ಬೇರೆಯಾಗಿದೆ ಆದ್ದರಿಂದ ಕೂಡಲೇ ವಿಚಾರ ವಿಮರ್ಶೆ ಮಾಡುವುದು ಸೂಕ್ತ.

ಶ್ರೀ ಭೀಮಣ್ಣ ಖಂಡ್ರೆ—ಬೀದರ್ ಜಿಲ್ಲೆಯಲ್ಲಿ ೮ಸಾವಿರ ಪಂಪ್‌ಸೆಟ್‌ಗಳು ಇದ್ದುವು. ಡಿಮ್ಯಾಂಡ್ ಚಾರ್ಜಸನ್ನು ಪೆಚ್ಚು ಮಾಡಿದ ಕಾರಣ ಎರಡು ಸಾವಿರ ಪಂಪ್‌ಸೆಟ್‌ಗಳು ಮಾತ್ರ ಕೆಲಸ ಮಾಡುತ್ತಿವೆ ೧೦ ರೂಪಾಯಿಗಳು ಡಿಮ್ಯಾಂಡ್ ಚಾರ್ಜಸ್ ಎಂಬುದಾಗಿ ವಸೂಲು ಮಾಡುತ್ತಿದ್ದಾರೆ. ಇದರ ಬಗ್ಗೆ ಅಜಿಟೇಷನ್ ನಡೆಯುತ್ತಿದೆ. ಇದರ ಬಗ್ಗೆ ಸತ್ಯಾಗ್ರಹ ಮಾಡುವುದಕ್ಕೂ ತಯಾರಾಗಿದ್ದಾರು. ಡಿಮ್ಯಾಂಡ್ ಚಾರ್ಜಸ್ ಹಾಕಿದ್ದೇ ತಪ್ಪು. ನಾನು ಆದಕ್ಕಾಗಿ ಸ್ಪಷ್ಟಪಡಿಸುತ್ತಿದ್ದೇನೆ. ಸರ್ಕಾರದ ನೀತಿ ಸರಿಯಾದುದಲ್ಲ. ಪ್ರತಿಯೊಂದಕ್ಕೂ ಒಂದು ಲಿಮಿಟ್ ಇದೆ. ಆದರೆ ಇದು ಲಿಮಿಟ್ ಬಿಟ್ಟು ಹೋಗಿದೆ. ತಾವು ಬಡ ಮಕ್ಕಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಸ್ವಲ್ಪ ದಿವಸದಲ್ಲೇ ಇಡೀ ಕರ್ನಾಟಕದಲ್ಲೇ ಒಂದು ದೊಡ್ಡ ಅಜಿಟೇಷನ್ ಮದ್ರಾಸ್ ರಾಜ್ಯದಲ್ಲಿ ಶುರುವಾಗಿದ್ದಂತೆ ಶುರುವಾಗುತ್ತದೆ. ಆದ್ದರಿಂದ ಸರ್ಕಾರ ಅಂತಹ ಒಂದು ಅವಕಾಶವನ್ನು ಕಲ್ಪಿಸಿಕೊಡಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವಿ. ರಾಜಶೇಖರನ್—ಆಲ್ಲಿಯವರೆಗೂ ಡಿಸ್‌ಕನೆಕ್ಟ್ ಮಾಡದಂತೆ ಆದಷ್ಟು ಜಾಗ್ರತೆ ಸರ್ಕಾರದಿಂದ ಒಂದು ಆಜ್ಞೆಯನ್ನು ಹೊರಡಿಸುವುದು ಮಂತ್ರಿಯಾದುದು. The Minister for Agriculture is supposed to be the guardian of the agriculturists. I would appeal to him to safeguard the interest of the farmers.

ಶ್ರೀ ಎಚ್.ಟಿ. ಕೃಷ್ಣಪ್ಪ—ಮಾನ್ಯ ಮಂತ್ರಿಗಳು ಈಗಾಗಲೇ ತಮ್ಮ ಹೇಳಿಕೆಯಲ್ಲಿ ಕೆಲವು ಭರವಸೆಗಳನ್ನು ಕೊಟ್ಟಿದ್ದಾರೆ. ಆದರೂ ಇದರ ಬಗ್ಗೆ ಗೊಂದಲ ಎಬ್ಬಿಸುವಂತಹ ಅಭಿಪ್ರಾಯವನ್ನು ಮಾನ್ಯ ಸದಸ್ಯರೊಬ್ಬರು ವ್ಯಕ್ತಪಡಿಸಿರುವುದು ಸಾಧುವಾದುದಲ್ಲ. ಇರತಕ್ಕ ತೊಂದರೆಗಳನ್ನು ಪರಸ್ಪರ ವಿಚಾರ ವಿಮರ್ಶೆ ಮಾಡಿಕೊಂಡು ಹೋಗತಕ್ಕಂಥಾದ್ದು ಒಳ್ಳೆಯದೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರೊಬ್ಬರು ಚಳುವಳಿ ಮಾಡತಕ್ಕಂಥಾ ಬೆದರಿಕೆಯನ್ನು ಹಾಕತಕ್ಕಾಂಥಾದ್ದು ಸಹ ಸರಿಯಲ್ಲ ನಿಜವಾಗಿಯೂ ವ್ಯವಸಾಯಗಾರರ ಬಗ್ಗೆ ಮಾನ್ಯ ಸದಸ್ಯರಿಗೆ ಇರುವಷ್ಟೇ ಕಳಕಳಿ ಸರ್ಕಾರಕ್ಕೂ ಇದೆ ಎನ್ನತಕ್ಕಂಥ ಭಾವನೆಯನ್ನು ಹೊಂದತಕ್ಕಂಥಾದ್ದು ಸರಿಯೆಂದು ನಾನು ಭಾವಿಸುತ್ತೇನೆ. ಮುಂದೆ ಏನು ಮಾಡುತ್ತೇವೆ ಎಂಬುದಾಗಿ ಹೇಳಬೇಕಾದ ಪ್ರಮೇಯ ಇಲ್ಲ ನ್ಯಾಯವಾಗಿ ನಡೆದುಕೊಳ್ಳುತ್ತೇವೆ ಎನ್ನತಕ್ಕಂಥ ನಿಲುವನ್ನೂ ತೆಗೆದುಕೊಂಡಾಗಲೂ ಮುತ್ತು ಇರತಕ್ಕ ತೊಂದರೆಗಳನ್ನು ನಿವಾರಣೆ ಮಾಡುತ್ತೇವೆ ಎಂದು ಹೇಳುತ್ತಿರುವಾಗ ಪುನಃ ಅದರ ಬಗ್ಗೆ ಚರ್ಚೆ ಮಾಡುವುದರಲ್ಲಿ ಅರ್ಥ ಇಲ್ಲ.

ಶ್ರೀ ಕೆ.ಎಚ್. ಪಸುಪೇಗೌಡ—ನನ್ನ ಒಂದು ಕ್ಲಾರಿಫಿಕೇಷನ್ ಏನೆಂದರೆ ನಮಗೆ ಕರೆಂಟ್ ಬೇಡ ಎಂಬುದಾಗಿ ಡಿಸೆನೆಕ್ಟ್ ಮಾಡಿ ವರ್ಷ ೬ ತಿಂಗಳಾದರೂ ಇನ್ನೂ ಪ್ರತಿ ತಿಂಗಳು ಡಿಮ್ಯಾಂಡ್ ಚಾರ್ಜಸನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಕೆ.ಎಚ್. ಶ್ರೀನಿವಾಸ್—ಮಾನ್ಯ ಸದಸ್ಯರು ಹೇಳುತ್ತಿರುವಂತೆ ಮಿನಿಮಮ್ ಚಾರ್ಜಸ್‌ನ್ನು ವಸೂಲು ಮಾಡುತ್ತಿರಬಹುದು. ಡಿಮ್ಯಾಂಡ್ ಚಾರ್ಜಸ್ ಎಂಬುದಾಗಿ ವಸೂಲು ಮಾಡುತ್ತಿಲ್ಲ. The demand charges has already been abolished. What the hon. member probably referring to might be minimum charges. Even if an installation is kept idle the minimum charges will have to be shelled down by the consumers.

ಶ್ರೀ ಕೆ.ಎಚ್. ಹನುಮೇಗೌಡ—ನಾನು ಹೇಳಿದ್ದು ಮಿನಿಮಮ್ ಚಾರ್ಜಸ್ ಎಂದಲ್ಲ ಡಿಮ್ಯಾಂಡ್ ಚಾರ್ಜಸ್.

ಶ್ರೀ ಕೆ.ಎಚ್. ಶ್ರೀನಿವಾಸ್—ಆ ರೀತಿ ಡಿಮ್ಯಾಂಡ್ ಚಾರ್ಜಸ್ ಎಂಬುದಾಗಿ ವಸೂಲು ಮಾಡಿದ್ದರೆ ಅದನ್ನು ವಾಪಸ್ಸು ಕೊಡಿಸುತ್ತೇನೆ.

ಆಮೇಲೆ ಪುನರ್ವಿಮರ್ಶಿಸಿದ ದರದ ಟ್ಯಾರಿಫ್ ಏನಿದೆ ಅದನ್ನು ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ವಿಶೇಷವಾಗಿ ಐ.ಪಿ. ಸೆಟ್ಸ್ ಇಟ್ಟುಕೊಂಡಿರುವವರಿಗೆ ಬಹಳ ತೊಂದರೆಯಾಗಿದೆ ಎಂಬುದಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಟ್ಯಾರೀಫ್ ರಿವೈಜ್ ಮಾಡಬೇಕಾದರೂ ಕೂಡ ವ್ಯವಸಾಯಗಾರರಿಗೆ ಅದರಲ್ಲಿ ಹೆಚ್ಚಿನ ಹೊರೆಯನ್ನು ಹೊರಿಸಬಾರದು ಎನ್ನುತಕ್ಕಂಥ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ ಎಂಬುದಾಗಿ ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ವ್ಯವಸಾಯಗಾರರ ಬಗ್ಗೆ ಸರ್ಕಾರ ಸಾಕಷ್ಟು ಮಮತೆಯನ್ನು ಹೊಂದಿದೆ. ವ್ಯವಸಾಯಗಾರರ ಬೇಡಿಕೆಗಳನ್ನು ಪೂರ್ಣ ಮಾಡಬಾರದು ಎಂಬುದು ಸರ್ಕಾರದ ಉದ್ದೇಶ ಅಲ್ಲ. ಇವತ್ತು ತಮಿಳುನಾಡಿನಲ್ಲೂ ಕೂಡ ಎಷ್ಟೋ ಚಳುವಳಿಯಾಗಿದೆ ಕೊನೆಗೆ ಚಳುವಳಿಗಾರರು ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡು ಸರ್ಕಾರದ ಜೊತೆಯಲ್ಲಿ ಮಾತುಕತೆ ಮಾಡಿಕೊಂಡು ಇರತಕ್ಕ ಸಮಸ್ಯೆಯನ್ನು ಬಗೆಹರಿಸಿಕೊಂಡಿದೆ. ಅದೇ ರೀತಿ ನಮ್ಮಲ್ಲೂ ಕೂಡ ಪರಸ್ಪರ ವಿಚಾರ ವಿಮರ್ಶೆ ಮಾಡುವುದರಿಂದ ಇರತಕ್ಕ ಸಮಸ್ಯೆಯನ್ನು ಬಗೆಹರಿಸಬಹುದು. ಮತ್ತು ಸರ್ಕಾರ ಈ ವಿಷಯವನ್ನು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ. ಒಂದು ಸಮಯ ಸಮಿತಿಯವರು ತೀರ್ಮಾನ ತೆಗೆದುಕೊಂಡು ರೇಟನ್ನು ಕಡಿಮೆ ಮಾಡಬೇಕೆಂದರೂ ವಿದ್ಯುಚ್ಛಕ್ತಿ ಮಂಡಲಿಗೆ ಇದರಿಂದ ಉಂಟಾಗುವ ನಷ್ಟವನ್ನು ಸರ್ಕಾರದವರು ಭರ್ತಿ ಮಾಡಿಕೊಡಬೇಕಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಿಯದ್ದೂ ತಪ್ಪುಗಳು ಇರಬಹುದು, ೫೦-೪೦ ಸಾವಿರ ಜನಗಳು ಕೆಲಸ ಮಾಡತಕ್ಕಂಥ ಒಂದು ಸಂಸ್ಥೆ. ಆ ಸಂಸ್ಥೆ ಎಲ್ಲಕ್ಕಿಂತ ಹೆಚ್ಚಿಗೆ ಎಫಿಸಿಯಂಟ್ ಆಗಿ ಕೆಲಸ ಮಾಡುತ್ತಿದೆ ಎಂದೂ ಹೇಳುವುದಿಲ್ಲ. ಅವರಿಗಳನ್ನು ತಾವು ನೋಡಬಹುದು. ಭಾರತ ದೇಶದಲ್ಲಿರುವ ಅನೇಕ ವಿದ್ಯುಚ್ಛಕ್ತಿ ಮಂಡಲಿಗಳಲ್ಲಿ ನಮ್ಮ ವಿದ್ಯುಚ್ಛಕ್ತಿ ಮಂಡಲಿಯ ಕೆಲಸ ಕಾರ್ಯಗಳ ಬಗ್ಗೆ ಒಂದು ಹೆಚ್ಚಿನ ಸ್ಥಾನ ಸಿಕ್ಕಿದೆ. ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಎಫಿಸಿಯನ್ಸಿ ಇಲ್ಲದಿರುವುದರಿಂದ ಟ್ಯಾರಿಫ ನ್ನು ಹೆಚ್ಚು ಮಾಡುತ್ತಿದ್ದಾರೆ ಎಂಬುದಾಗಿ ಹೇಳತಕ್ಕಾಂಥಾದ್ದು ಆಷ್ಟುಸಮಂಜಸವಾದುದಲ್ಲ ಆದ್ದರಿಂದ ನ್ಯಾಯವಾಗಿ ವ್ಯವಸಾಯಗಾರರಿಗೆ ಏನು ಹೆಚ್ಚಳ ಮಾಡಬೇಕೋ ಅದನ್ನು ಅವರು ಹೊರಬೇಕಾಗುತ್ತದೆ. ಆದರ ಬಗ್ಗೆ ಮಾನ್ಯ ಸದಸ್ಯರೂ ಕೂಡ ಸರ್ಕಾರಕ್ಕೆ ಬೆಂಬಲ ಕೊಡಬೇಕಾಗುತ್ತದೆ. ವ್ಯವಸಾಯಗಾರರಿಗೆ ಸರ್ಕಾರದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದು ಸರ್ಕಾರದವರೊಬ್ಬರ ಜವಾಬ್ದಾರಿಯಲ್ಲ. ನಮ್ಮೆಲ್ಲರ ಜವಾಬ್ದಾರಿ ನಿಮಗೂ ಕೂಡ ಇದೆ. ಆ ಒಂದು ದೃಷ್ಟಿಯಿಂದ ಈ ವಿಷಯವನ್ನು ವಿವೇಚನೆ ಮಾಡಬೇಕು, ಚಳುವಳಿ ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದು ಅನಗತ್ಯ ಎಂಬುದಾಗಿ ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಂ.ವಿ. ರಾಜಶೇಖರನ್—ಸರ್ಕಾರ ಪರಿಶೀಲನೆ ಮಾಡುವವರೆಗೂ ಡಿಸೆಕನೆಕ್ಟ್ ಮಾಡದ ಹಾಗೆ ಸರ್ಕಾರದವರು ನೋಡಿಕೊಳ್ಳಬೇಕು.

ಶ್ರೀ ಕೆ.ಎಚ್. ಶ್ರೀನಿವಾಸ್.—ಡಿಸ್‌ಕನೆಕ್ಟ್ ಮಾಡಿಸದ ಹಾಗೆ ಸೂಚನೆಯನ್ನು ಕೊಡುತ್ತೇನೆ.

Observation of the Chair about Absence of the Minister and Members

ಅಧ್ಯಕ್ಷರು—ಪ್ರಶ್ನೋತ್ತರದ ಸಮಯದಲ್ಲಿ ಸದಸ್ಯರ ಹಾಜರಾತಿ ಇಲ್ಲದಿದ್ದರೂ ಬಹಳ ಕಷ್ಟವಾಗುತ್ತದೆ. ಮತ್ತು ಮಾನ್ಯ ಸಚಿವರುಗಳೂ ಕೂಡ ಸರಿಯಾದ ಸಮಯಕ್ಕೆ ಉತ್ತರ ಕೊಡಲು ಬಾರದಿದ್ದರೂ ಕೂಡ ಬಹಳ ತೊಂದರೆಯಾಗುತ್ತದೆ. ಒಂದು ಪ್ರಶ್ನೆಗೆ ಉತ್ತರವನ್ನು ಸರ್ಕಾರದಿಂದ ತರಿಸಬೇಕಾದರೆ ಎಷ್ಟು ಸಾವಿರ ರೂಪಾಯಿಗಳು ಸರ್ಕಾರಕ್ಕೆ ಖರ್ಚಾಗುತ್ತವೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದನ್ನು ಮಾನ್ಯ ಸದಸ್ಯರುಗಳಾಗಲೀ ಹಾಗೂ ಮಾನ್ಯ ಸಚಿವರುಗಳಾಗಲೀ ಅರ್ಥ ಮಾಡಿಕೊಳ್ಳಬೇಕು. ಇದರಿಂದ ಸರ್ಕಾರಕ್ಕೂ ನಷ್ಟವಾಗುತ್ತದೆ. ಸಾರ್ವಜನಿಕರಿಗೂ ನಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಪುನಃ ರಿಪೀಟ್ ಮಾಡಬಾರದು ಎಂಬುದಾಗಿ ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.